ಶ್ರೀ ಆರ್. ಎಲ್. ಜಾಲಪ್ಪ.— ಹಣ ವಸೂಲ್ಮಾಡಿದ್ದಾರೆ, ಪೇರು ಕಲೆಕ್ಟ್ ಮಾಡಿದ್ದಾರೆ ಮತ್ತು ಮೆಷಿನರ್‌ಗೆ ಆರ್ಡರ್ ಕೊಟ್ಟಿದ್ದಾರೆ, ಸ್ಟೇಟ್ ಲೆವಲ್ ಆಡ್ವೈಸರಿ ಕಮಿಟಿಯವರು ಮೆಷಿನರಿಗೆ ಆರ್ಡರ್ ಕೊಟ್ಟಿದ್ದಾರೆ ಯಾವ ಸಂಸ್ಥೆಯವರು ದುರುಪಯೋಗ ಮಾಡಿದ್ದಾರೆಂದು ದೂರು ಬಂದಿಲ್ಲ. ಮಾನ್ಯ ಸದಸ್ಯರ ಹತ್ತಿರ ದೂರು ಇದ್ದು ಅದನ್ನು ನನ್ನ ಕಡೆ ಕೊಟ್ಟರೆ ವಿಚಾರಣೆ ಮಾಡಿ ಸಂತ್ತೇನೆಂದು ಆಗಲೇ ಹೇಳಿದ್ದೇನೆ.

ಶ್ರೀ ಬಿ. ಎಂ. ಇದಿನಬ್ಬ.— (ಸದಸ್ಯರು ಹಾಜರಿರಲಿಲ್ಲ)

ಸಂಸ್ಥಿ ಬಡ್ತಿಯಿಂದ ವಿನಾಯ್ತಿ.

೧೦೧೫. ಶ್ರೀ ಕೆ. ಬಿ. ಕೋಳಿವಾಡ (ರಾಣೆಬೆನ್ನೂರು).— ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಕುರಿ ಸಾಕಣೆ ಮತ್ತು ಉಣ್ಣೆ ಉತ್ಪಾದನೆ ಸಹಕಾರಿ ಸಂಘಗಳು, ಸಹಕಾರಿ ಕ್ಷೇತ್ರದಲ್ಲಿ ಬರುತ್ತವೆಯೇ ?

ಆ) ಪ್ರಥಮಿಕ ಸಹಕಾರಿ ಪತ್ತಿನ ಸಂಘಗಳು ಹಾಗೂ ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ಸುಸ್ತಿ ಬಡ್ಡಿ ವಸೂಲಾತಿಯನ್ನು ಸರಕಾರವು ಮನ್ನಾ ಮಾಡಿರುವುದು ನಿಜವೆ ?

ಇ) ಹಾಗಿದ್ದಲ್ಲಿ, ಇದೇ ರೀತಿಯ ಮನ್ನಾವನ್ನು ಕುರಿ ಸಾಕಣೆ ಹಾಗೂ ಉಣ್ಣೆ ಉತ್ಪಾದನೆಯಲ್ಲಿ ತೊಡಗಿರುವ ಸಹಕಾರಿ ಸಂಘಗಳಿಗೆ ಏಕೆ ವಿಸ್ತರಿಸಲಾಗಲಿಲ್ಲ. ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ಹೌದು.

ಆ) ಸಣ್ಣ ಮತ್ತು ಅತೀ ಸಣ್ಣ ರೈತರು, ಪ್ರಾರ್ಥಮಿಕ ವ್ಯವಸಾಯ ಸೇವಾ ಸಹಕಾರ ಸಂಘಗಳು ಮತ್ತು ಪ್ರಾಥಮಿಕ ಸಹಕಾರಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳಿಂದ ಸಾಲ ಪಡೆದು ಕೊಂಡಿದ್ದು, ೩೧-೩-೧೯೮೪ರ ಒಳಗಾಗಿ ಪೂರ್ತಿ ಸುಸ್ತಿ ಸಾಲ ಮರುಪಾವತಿ ಮಾಡಿದಲ್ಲಿ ಅಂಥ ರೈತರಿಗೆ ಸರಕಾರವು, ಸುತ್ತಿ ಬಡ್ಡಿ ಮನ್ನಾ ಮಾಡಿದೆ.

ಇ) ಆರ್ಥಿಕ ಅಡಚಣೆಗಳು ಮತ್ತು ಇದರಿಂದ ಸಾಮಾನ್ಯ ವಸೂಲಾತಿಯ ಮೇಲೆ ಆಗುವ ಪರಿಣಾಮಗಳಿಗೋಸ್ಕರ, ಸರಕಾರವು ಎಲ್ಲಾ ಸಂಘಗಳಿಂದ ನೀಡಿದ ಸಾಲದ ಮೇಲೆ ಸುಸ್ತಿ ಬಡ್ಡಿ ಮನ್ನಾ ನೀಡಿಲ್ಲ.

ಶ್ರೀ ಎಂ. ಎಸ್. ಪಾಟೀಲ್ (ಶ್ರೀ ಕೆ. ಬಿ. ಕೋಳಿವಾಡ ಅವರ ಪರವಾಗಿ) —ಈ ಪ್ರಶ್ನೆ ಸಾಮಾನ್ಯ ಬಡ ಕುಟುಂಬಕ್ಕೆ ಸಂಬಂಧಪಟ್ಟ ಪ್ರಶ್ನೆ. ಕುರಿ ಸಾಕಣೆ ಮಾಡತಕ್ಕ ಸಮಾಜಕ್ಕೆ ಸಂಬಂಧ ಪಟ್ಟ ಪ್ರಶ್ನೆ. ರೈತರಿಗೆ ಯಾವ ರೀತಿ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಿದ್ದೀರಿ ಅದೇ ರೀತಿ ಇವರಿಗೂ ಕೂಡ ಮಾಡುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.—ವ್ಯವಸಾಯಗಾರರು ತೆಗೆದುಕೊಂಡಿರುವ ಯಾವ ಸಾಲವನ್ನು ನಾವು ವ್ಯವಸಾಯ ಸಾಲ ಎಂದು ಪರಿಗಣಿಸಿದ್ದೇವೆ ಅದನ್ನು ವಜಾ ಮಾಡಿದ್ದೇವೆ. ಆ ರೀತಿ ಇದನ್ನು ವಜಾ ಮಾಡುವುದಕ್ಕೆ ಹೋದರೆ ೧೫೦ ಕೋಟಿ ರೂಪಾಯಿ ಆಗುತ್ತದೆ. ಆದ್ದರಿಂದ ಆ ರೀತಿ ಮಾಡುವುದಕ್ಕೆ ಬರುವುದಿಲ್ಲ. ಇದು ಸಾಧ್ಯವಾಗದ ಪ್ರಶ್ನೆ,

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಶ್ರೀ ಕೆ. ವಸಂತ ಬಂಗೇರ
ಶ್ರೀ ಹೆಚ್. ಸಿ. ಮಹದೇವಪ್ಪ
ಶ್ರೀ ಬಿ. ಎ. ಉಪ್ಪಿನ
ಶ್ರೀ ಶರಣ ಬಸಪ್ಪ
ಶ್ರೀ ಬಂಕರ ಮೂರ್ತಿ
ಶ್ರೀ ಮಲ್ಲಿಕಯ್ಯ ಗುತ್ತೆದಾರ್